ಸಾಕ್ಷಿಯನ್ನು ದಿನಾಂಕಃ15.12.2020 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ- 1ನೇ ಪ್ರತಿವಾದಿ ಪರ ಶ್ರೀ ಎಂ.ಎಂ ವಕೀಲರಿಂದ.**

ನನ್ನ ತಂದೆ ಬದುಕಿದ್ದಾಗಲೇ ಅವರ ಸಹೋದರರ ನಡುವೆ ವಿಭಾಗಕ್ಕೆಂದು ಅಸಲು ದಾವಾ ಸಂಖ್ಯೆ 223/1993ರನ್ನು ಹೂಡಲಾಗಿತ್ತು ಎಂದರೆ ಸರಿ. ನನ್ನ ತಂದೆ 2010ರಲ್ಲಿ ಮರಣ ಹೊಂದಿರುತ್ತಾರೆ. ದಿಃ19/03/1994ರಂದು ಕಪ್ಪಣ್ಣಗೌಡ ಪೌತಿಯಾಗಿದ್ದರು ಎಂದರೆ ಸರಿ. ಸದರಿ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ದಾವೆಯಲ್ಲಿ ಕಪ್ಪಣ್ಣಗೌಡರ ಹೆಸರಿಗೆ ಬಂದ ಜಮೀನುಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಕಪ್ಪಣ್ಣಗೌಡರ ಮರಣಾನಂತರ ಅವರ ಕುಟುಂಬದಲ್ಲಿ ದಾವಾ ಷೆಡ್ಯೂಲ್ 1 ರಿಂದ 14 ಸ್ವತ್ತುಗಳ ಬಗ್ಗೆ ನಡೆದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ವಕೀಲರ ಬಳಿ ಬರೆಸಿರುತ್ತೇನೆ. 7ನೇ ಪ್ರತಿವಾದಿಯ ಮದುವೆಯನ್ನು 1ನೇ ಪ್ರತಿವಾದಿ ದಿಃ26/06/1997ರಂದು ಮಾಡಿದ್ದಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಮತ್ತು ಆಕೆಯ ಗಂಡುಮಕ್ಕಳು ಒಟ್ಟಾಗಿ ಮಾಡಿದ್ದಾರೆ. 7ನೇ ಪ್ರತಿವಾದಿಯ ಮದುವೆಯಾಗುವ ಕಾಲಕ್ಕೆ 1ನೇ ಪ್ರತಿವಾದಿಯ ಗಂಡು ಮಕ್ಕಳು ಗ್ರಾಮದಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಮನೆಯ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಎಂದಿಗೂ ಕುಟುಂಬದ ಯಜಮಾನಿಕೆ ಮಾಡಿಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ಕುಟುಂಬದ ಯಜಮಾನನಾಗಿ ಅಸಲು ದಾವಾ ಸಂಖ್ಯೆ 223/1993ರಲ್ಲಿ ರಾಜಿ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಯಾವ ವಿಚಾರಗಳನ್ನು ಆದರಿಸಿ ದಾವೆ ಮಾಡಿದ್ದಾನೆ ಎಂದು ನನಗೆ ಮಾಹಿತಿ ಇಲ್ಲ. ಕಪ್ಪಣ್ಣಗೌಡರಿಗೆ ಇದ್ದ ಆದಾಯದ ಮೂಲಗಳ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ. ದಾವಾ ಷೆಡ್ಯೂಲ್

12, 15 ಮತ್ತು 16ರ ಆಸ್ತಿಗಳು ಅಸಲು ದಾವಾ ಸಂಖ್ಯೆ 223/1993ರ ಡಿಕ್ರಿಯಲ್ಲಿ ಬಂದ ಆಸ್ತಿಗಳಲ್ಲ ಎಂದರೆ ಸರಿ. ಸದರಿ ಆಸ್ತಿಗಳನ್ನು ಯಾರು ಯಾರ ಹೆಸರಿನಲ್ಲಿ ಯಾರಿಂದ ಖರೀದಿಸಿದ್ದಾರೆ ನನಗೆ ಮಾಹಿತಿ ಇಲ್ಲ. 8ನೇ ಪ್ರತಿವಾದಿ ಕಪ್ಪಣ್ಣಗೌಡರ ಸೊಸೆ. 8ನೇ ಪ್ರತಿವಾದಿ ದಾವಾ ಸ್ವತ್ತುಗಳ ಪೈಕಿ ಯಾವ ಸ್ವತ್ತಿನೊಂದಿಗೆ ಯಾರ ಮತ್ತು ಯಾರೊಂದಿಗೆ ವ್ಯವಹಾರ ಮಾಡಿದ್ದಾರೆ ನನಗೆ ತಿಳಿದಿಲ್ಲ. 8ನೇ ಪ್ರತಿವಾದಿ ನೆಲಮಂಗಲ ತಾಲ್ಲೂಕಿನ ಇಸ್ಸೂರು ಗ್ರಾಮದವರು. 8ನೇ ಮತ್ತು 6ನೇ ಪ್ರತಿವಾದಿಯ ಮದುವೆ ಯಾವಾಗ ನಡೆದಿದೆ ನನಗೆ ತಿಳಿದಿಲ್ಲ. ಕಪ್ಪಣ್ಣಗೌಡರ ಮರಣಾನಂತರ 1ನೇ ಪ್ರತಿವಾದಿ ದಾವಾ ಆಸ್ತಿಗಳ ಮೇಲೆ ಏನು ಏನು ವ್ಯವಹಾರ ಮಾಡಿದ್ದಾರೆ ನನಗೆ ತಿಳಿದಿಲ್ಲ. ವಾದಿ ಮತ್ತು ಪ್ರತಿವಾದಿಯ ಕುಟುಂಬದ ವ್ಯವಹಾರಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಕಪ್ಪಣ್ಣಗೌಡರು ಬದುಕಿದ್ದ ಕಾಲದಲ್ಲಿ ಆತನ ಗಂಡು ಮಕ್ಕಳು ಗ್ರಾಮದಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ
ಕುಣಿಗಲ್.